# ದಲಿತ ಸಂಘರ್ಷ ಸಮಿತಿ

(ಸಂಯೋಜಿತ) ಬೆಂಗಳೂರು ಜಿಲ್ಲಾ ಸಮಿತಿ

ಎಂ. ರಮೇಶ್ (ಜಿಲ್ಲಾ ಸಂಯೋಜಕ) M. Ramesh (Dist. Co-Ordinator) Mob : 9740152184

DALITHA SANGHARSHA SAMITHI. (CO-ORDINATION) BANGALORE DISTRICT COMMITTEE

#92, ರಾಮಗೋಂಡನಹಳ್ಳಿ, ಸಿಂಗನಾಯಕನಹಳ್ಳಿ ಅಂಚೆ, ಯಲಹಂಕ, ಬೆಂಗಳೂರು – 560064.

#92,Ramagondanahalli, Singanayakanahalli Post, Yelahanka, Bengaluru- 560064.

ರವರಿಗೆ,

ದಿನಾಂಕ : 30.08.2021

ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌದ, ಬೆಂಗಳೂರು.

<u>ರಾಮಗೊಂಡನಹಳ್ಳಿ ಸೇರಿದಂತೆ 17 ಗ್ರಾಮಸ್ಥರ ಪರವಾಗಿ</u>

**ವಿಷಯ:-** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಹೊರಟಿರುವ ಡಾ॥ ಕೇ. ಶಿವರಾಮ ಕಾರಂತ ಬಡಾವಣೆಯ ಭೂಸ್ವಾದೀನ ಪ್ರಕ್ರಿಯೆಯಲ್ಲಿ ಅಧಿಕಾರಿಗಳ ದೌರ್ಜನ್ಯ ಹಾಗೂ ಸರ್ವಾಧೀಕಾರಿ ದೋರಣೆ ಖಂಡಿಸಿ ಮನವಿ.

ಮಾನ್ಯರೇ,

ಭಾರತ ದೇಶ ಸ್ವತಂತ್ರ್ಯ ಹೊಂದಿ ಇಂದಿಗೆ 74 ವರ್ಷ ಪೂರೈಸುತಿರುವ ಈ ಸಂಧರ್ಬದಲ್ಲಿ ನೋವಿನ ಸಂಗತಿಯೆನೆಂದರೆ ಇನ್ನೂ 74 ವರ್ಷ ಕಳೆದರು ದಲಿತರು ಮತ್ತು ಈ ದೇಶಕ್ಕೆ ಅನ್ನ ಕೊಡುವ ರೈತನಿಗೆ ತಮ್ಮ ಹಕ್ಕನ್ನು ಪ್ರತಿಪಾದಿಸುವ ಸ್ವತಂತ್ರ ಸಿಗುವುದು ಅನುಮಾನವಾಗಿದೆ.

ಇದಕ್ಕೆ ಸ್ಪಷ್ಟ ಉದಾ:- ಬೆಂಗಳೂರು ಅಬಿವೃದ್ಧಿ ಪ್ರಾದಿಕಾರವು ನಿರ್ಮಿಸಲು ಹೋರಟಿರುವ ಡಾ॥ ಕೇ. ಶಿವರಾಮ ಕಾರಂತ ಬಡಾವಣೆ. ಮಾನ್ಯ ಘನತೆವೆತ್ತ ಅಧಿಕಾರಿಗಳೇ ಹಾಗೂ ಪ್ರಜಾ ಪ್ರತಿನಿಧಿಗಳೇ ತಮಗೆಲ್ಲರಿಗೂ ತಿಳಿದಿರುವ ಹಾಗೆ 2008 ರಲ್ಲಿ ಪ್ರಾರಂಭವಾದ ಬಡಾವಣೆ ಯೋಜನೆಯ ಪ್ರಕ್ರಿಯೆಗಳು ಈಗ 2021 ರಲ್ಲಿ ಅಂತಿಮ ಘಟ್ಟಕ್ಕೆ ಬಂದು ನಿಂತಿದೆ. 2008 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಲಹಂಕ ಹೋಬಳಿ, ಹೆಸರಘಟ್ಟ ಹೋಬಳಿ ಹಾಗೂ ಯಶವಂತಪುರ ಹೋಬಳಿಯ 17 ಗ್ರಾಮಗಳ 3545 ಎಕರೆ 12 ಗುಂಟೆ ಜಮಿನುಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ಹೋರಡಿಸಿತ್ತು ತದನಂತರ 2014 ರ ವರೆಗೂ ಯಾವುದೇ ಪ್ರಕ್ರಿಯೆಗಳನ್ನು ನಡೆಸದೇ ಇರುವುದು ತಮ್ಮೆಲರಿಗೂ ತಿಳಿದಿರುವ ವಿಚಾರ ಪ್ರಾಧಿಕಾರದಿಂದ ಯಾವುದೇ ಪ್ರಗತಿಯನ್ನು ಕಾಣದಿದ್ದಾಗ ಈ ಭಾಗದ ಕೆಲವು ರೈತರು ರಾಜ್ಯ ಉಚ್ಚನ್ಯಾಯಲಯದ ಮೊರೆ ಹೋಗಿ ತಮ್ಮ ಅಳಲನ್ನು ತೋಡಿಕೊಂಡಿದ್ದರ ಪರಿಣಾಮ ಮಾನ್ಯ ಉಚ್ಚನ್ಯಾಯಲಯವು



Scanned with CamScanner

# ದಲಿತ ಸಂಘರ್ಷ ಸಮಿತಿ

(ಸಂಯೋಜಿತ) ಬೆಂಗಳೂರು ಜಿಲ್ಲಾ ಸಮಿತಿ

ಎಂ. ರಮೇಶ್ (ಜಿಲ್ಲಾ ಸಂಯೋಜಕ) M. Ramesh (Dist. Co-Ordinator) Mob : 9740152184

DALITHA SANGHARSHA SAMITHI. (CO-ORDINATION) BANGALORE DISTRICT COMMITTEE

#92, ರಾಮಗೋಂಡನಹಳ್ಳಿ, ಸಿಂಗನಾಯಕನಹಳ್ಳಿ ಅಂಚೆ, ಯಲಹಂಕ, ಬೆಂಗಳೂರು – 560064.

#92,Ramagondanahalli, Singanayakanahalli Post, Yelahanka, Bengaluru- 560064.

ಪ್ರಾಧಿಕಾರದ ಪ್ರಾಥಮಿಕ ಅಧಿಸೂಚನೆಯನ್ನು ರದ್ದುಗೊಳಿಸಿತ್ತು. ತದನಂತರ 2017 ರಲ್ಲಿ ಪ್ರಾಧಿಕಾರವು ಭಾರತದ ಸರ್ವೋಚ್ಚ ನ್ಯಾಯಲಯಕ್ಕೆ ಮೇಲ್ಮನವಿ ಸಲ್ಲಿಸಿತ್ತು. ದಿನಾಂಕ 03.08.2018 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2008 ರಲ್ಲಿ ಹೊರಡಿಸಿದ್ದ ಪ್ರಾಥಮಿಕ ಅಧಿಸೂಚನೆಯ 17 ಗ್ರಾಮಗಳ 3545 ಎಕರೆ 12 ಗುಂಟೆ ಜಮಿನನ್ನು 6(1) [ಬಿ.ಡಿ.ಎ. ಕಾಯಿದೆ 19(1) ಅಡಿಯಲ್ಲಿ] ಮಾಡಲು ಆದೇಶ ನೀಡಿತ್ತು.

ಮೇಲ್ಕಂಡ ಆದೇಶವನ್ನು ಅನುಷ್ಠಾನಗೊಳಿಸುವ ಭಾಗವಾಗಿ ಪ್ರಾಧಿಕಾರದ ಅಧಿಕಾರಿಗಳಾದ ನೀವುಗಳು ದಿನಾಂಕ : 07.09.2018 ರಂದ್ದು ಮಂಡಳಿಯ ಸಭೆಯನ್ನು ನಡೆಸಿ ಸರ್ಕಾರಕ್ಕೆ ಪ್ರಸ್ಥಾವನೆಯನ್ನ ಸಲ್ಲಿಸಿರುತ್ತೀರಿ. ಈ ಸಂಧರ್ಭದಲ್ಲಿ ಸುಧೀರ್ಗವಾಗಿ ಚರ್ಚಿಸಿ ಯೋಜನೆಯ ವೆಚ್ಚ, ಬಡಾವಣೆ ನಿರ್ಮಿಸುವ ವೆಚ್ಚ ಮತ್ತು ರೈತರಿಗೆ ಪುನರ್‌ವಸತಿ ಕಲ್ಪಿಸುವ ವೆಚ್ಚಗಳನ್ನು ಒಳಗೊಂಡ ಸಮಗ್ರ ಯೋಜನೆಯಲ್ಲಿ ರೈತರ ಸಹಭಾಗಿತ್ವದೊಂದಿಗೆ ಯೋಜನೆಯನ್ನು ಅನುಷ್ಠಾನಗೋಳಿಸಲು ನಿರ್ಧರಿಸಿರುತೀರಿ.

ಮೇಲೆ ನೀವು ಸಲ್ಲಿಸಿರುವ ಪ್ರಸ್ಥಾವನೆಯಲ್ಲಿ The Right to Fair Compensation and transparency in land Acquisition. Rehabilitation and re settlement ACT-2013 ಅನ್ವಯ ರೈತರಿಗೆ ರೂ. 9,482,70,43,500/– ಹಾಗೂ ಬಡಾವಣೆ ನಿರ್ಮಾಣ ವೆಚ್ಚ ಸೇರಿ 13,833 ಕೋಟಿ ರೂ. ಗಳೆಂದು ಹಾಗೂ ಇದಲ್ಲದೇ ಸದರಿ ಕಾಯ್ದೆಯಡಿ ನೀಡಬೇಕಾದ ಇತರೆ ಸವಲತ್ತುಗಳನ್ನು ಸಹ ನೀಡಬೇಕಾಗುತ್ತೆದೆ ಎಂದು ಪ್ರಸ್ಥಾವನೆ ಸಲ್ಲಿಸಿರುವುದು ತಮಗೆ ತಿಳಿದಿರುವ ವಿಷಯ. ಮುಂದುವರೆದು ತಮ್ಮ ಪ್ರಸ್ಥಾವನಯನ್ನು ಪರಿಶೀಲಿಸಿದ ರಾಜ್ಯ ಸರ್ಕಾರ ಕೆಲವು ಷರತ್ತುಗಳನ್ನು ವಿಧಿಸಿ ಮಂಜೂರಾತಿಯನ್ನು ನೀಡಿರುತ್ತದೆ.

**ಷರತ್ತುಗಳು :**

1. ಸರ್ಕಾರದಿಂದ ಯಾವುದೇ ಹಣಕಾಸು ನೆರವನ್ನು ಅಪೇಕ್ಷಿಸದೇ ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಬೆಂಗಳೂರು ಅಭಿವೃದ್ಧಿ ಪಾದಿಕಾರವು ತನ್ನ ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು.



Scanned with CamScanner

2. ಪ್ರಸ್ತುತ ಯೋಜನೆಗೆ ಪ್ರಾಧಿಕಾರವು ಪಡೆಯಬಹುದಾದ ಯಾವುದೇ ಸಾಲಗಳಿಗೆ ಸರ್ಕಾರವು ಖಾತರಿಯನ್ನು ನೀಡುವುದಿಲ್ಲ ಮತ್ತು ಸದರಿ ಸಾಲವನ್ನು ತೀರಿಸುವ ಹೊಣೆ ಪ್ರಾಧಿಕಾರದ್ದಾಗಿರುತ್ತದೆ.

3. ಪ್ರಸ್ತುತ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರವು ಮಾಡಿಕೊಳ್ಳುವ ಯಾವುದೇ ವ್ಯವಹಾರಗಳಿಗೆ ಸರ್ಕಾರವು ಭಾಗಿಯಾಗುವುದಿಲ್ಲ.

4. ಪ್ರಸ್ತುತ ಯೋಜನೆಗೆ ಸಂಬಂಧಿಸಿದಂತೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳುವ ಕಾಲದಲ್ಲಿ ಅದಕ್ಕೆ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

5. ವಲಯ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಅಗತ್ಯಗಳನ್ನು ಪೂರೈಸತಕ್ಕದ್ದು.

ಹಾಗೂ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 01.11.2018 ರಂದು ರಾಜ್ಯ ಪತ್ರ ಹೊರಡಿಸಿದ್ದು ಸ್ಪಷ್ಟವಾಗಿ The Right to Fair Compensation and transparency in land Acquisition. Rehabilitation and re settlement ACT-2013 ರ ಕಾಯಿದೆಯ ಅನ್ವಯ ಯೋಜನೆಯನ್ನು ಅನುಷ್ಠನಗೊಳಿಸಲು ಆದೇಶ ಹೊರಡಿಸಿರುತ್ತದೆ.

ಮೇಲ್ಕಂಡ ಸರ್ಕಾರದ ಮಂಜುರಾತಿ ಹಾಗೂ ಸರ್ಕಾರದ ರಾಜ್ಯ ಪತ್ರದ ಆದೇಶವನ್ನು ಪಾಲಿಸುವ ಭಾಗವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2018–2019 ರಲ್ಲಿ 6(1) [ಬಿ.ಡಿ.ಎ. ಕಾಯಿದೆ 19(1) ಅಡಿಯಲ್ಲಿ] ಪ್ರಕ್ರಿಯೆಯನ್ನು ಪ್ರಾರಂಭಮಾಡಿತು. ಅದರಂತೆ ರೈತರಿಗೆ ನೊಟೀಸು ಜಾರಿ ಮಾಡಿರುವುದು ತಮ್ಮ ಗಮನದಲ್ಲಿದೆ. ನೊಟೀಸು ಜಾರಿ ಮಾಡಿದ ಸಂದರ್ಭದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಲು ರೈತರಿಗೆ ಅವಕಾಶ ಕೊಟ್ಟಿರುವುದು ನ್ಯಾಯಸಮ್ಮತವಾದ ನಡೆ. ಅದರಂತೆ ರಾಮಗೊಂಡನಹಳ್ಳಿ ಸೇರಿ 17 ಗ್ರಾಮಗಳ ರೈತರು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಆದರೆ ಈ ಯಾವುದೇ ಆಕ್ಷೇಪಣೆಗಳಿಗೆ (Personal Hearing) ಅಥವಾ (Public Hearing) ಮಾಡದೇ ಐತೀರ್ಪು ಮಾಡಲು ಹೊರಟಿರುವುದು ಈ ಭಾಗದ ರೈತರ ಹಕ್ಕನ್ನು ಕಸಿದು ನಮ್ಮಗಳ



Scanned with CamScanner

ಮೇಲೆ ಸರ್ವಾಧಿಕಾರಿ ಧೋರಣೆ ಅನುಸರಿಸಿ ನಮ್ಮ ಹಕ್ಕುಗಳನ್ನು ಕಸಿದು ರೈತರನ್ನು ಧಮನ ಮಾಡುವ ಪ್ರೌವೃತ್ತಿಯಾಗಿದೆ.

ಈ ಯೋಜನೆ ಪ್ರಾರಂಭವಾದಂದಿನಿಂದಲು ಈ ಭಾಗದ ರೈತರು, ನಿವೇಶನದಾರದು, ಮನೆಮಾಲೀಕರುಗಳು ಈ ಯೋಜನೆಗಳನ್ನು ರದ್ದುಗೋಳಿಸುವಂತೆ ಆಗ್ರಹಿಸಿ ನೂರಾರು ಧರಣಿ ಪ್ರತಿಭಟನೆಗಳನ್ನು ಮಾಡಿರುವುದಲ್ಲದೆ ಈಗ ಸುಮಾರು 15 ದಿನಗಳಿಂದಲು ರಾಮಗೊಂಡನಹಳ್ಳಿ ಸೇರಿದಂತೆ 17 ಗ್ರಾಮಗಳ ರೈತರು ಅನಿರ್ಧಿಷ್ಟ ಅವಧಿ ಧರಣಿ ಸತ್ಯಾಗ್ರಹ ಮಾಡುತಿರುವುದು ತಮಗೆಲ್ಲಾ ತಿಳಿದಿರುವ ವಿಷಯ. ಪ್ರಜಾವಾಣಿ, ವಿಜಯ ಕರ್ನಾಟಕ ದಿನಪತ್ರಿಕೆಗಳು ಸೇರಿದಂತೆ ಹಲವಾರು ಮಾಧ್ಯಮಗಳಲ್ಲಿ ಈ ವರದಿಗಳನ್ನು ತಾವುಗಳು ಗಮನಿಸಿರುತ್ತೀರಿ. ಮುಂದುವರೆದು 2015ನೇ ಇಸವಿಯಲ್ಲಿ ಹೆಚ್.ಡಿ.ಎಫ್.ಸಿ. ರಿಯಾಲಿಟಿ ಎನ್ನುವ ಖಾಸಗಿ ಸಂಸ್ಥೆಯಿಂದ ಬಡವಾಣೆಗೆ ಬಳಕೆಯಾಗುವ ನೈಜ್ಯ ಭೂಮಿಯನ್ನು ಗುರುತಿಸಲು ತಿಳಿಸಿರುತ್ತೀರಿ. ಅದರ ವರದಿಯಂತೆ ಬಡಾವಣೆ ನಿರ್ಮಾಣಕ್ಕೆ ಯೋಗ್ಯವಿರುವುದು 878 ಎಕ್ಕರೆ 3 ಗುಂಟೆ ಎಂಬುದು ನಿಮ್ಮ ಗಮನದಲ್ಲಿದೆ.

ಇಂತಹ ವಿಷಮ ಪರಿಸ್ಥಿಯಲ್ಲಿ ಈ ಭಾಗದ ರೈತರ ಆರ್ಥಿಕ ಹಾಗೂ ಸಮಾಜಿಕ ಪರಿಸ್ಥಿಗಳನ್ನು ಬಿ.ಡಿ.ಎ. ಹಾಗೂ ಸರ್ಕಾರವು ಅವಲೋಕಿಸಿ ಇದಕ್ಕೆ ಸೂಕ್ತ ಪರಿಹಾರ ಸೂಚಿಸುವ ಆಶಾಭಾವನೆ ಈ ಭಾಗದ ರೈತರಲ್ಲಿತ್ತು. ಆದರೆ ಮೇಲೆ ಹೇಳಿದ ಸಮಸ್ಯಗಳ ಮೇಲೆ ಬೆಳಕು ಚೆಲ್ಲದೆ ವಾಮ ಮಾರ್ಗದಲ್ಲಿ ನಮ್ಮ ಭೂಮಿಗಳನ್ನು ವಷಪಡಿಸಿಕೊಳ್ಳುತ್ತೇವೆಂಭ ಉಂಬ ತನದಲ್ಲಿ ಬಿ.ಡಿ.ಎ. ಅಧಿಕಾರಿಗಳು ನಿರತರಾಗಿರುವ ಸಂದರ್ಭದಲ್ಲಿ ಅನಿವಾರ್ಯವಾಗಿ ನಮ್ಮ ಆರ್ಥಿಕ ಹಾಗು ಸಮಾಜಿಕ ಪರಿಸ್ಥಿಗಳನ್ನು ವಿವರಿಸಲೇ ಬೇಕಾದ ಸಂದರ್ಭ ಒದಗಿದೆ.

ಈ ಭಾಗದ ರೈತರು ಕೃಷಿ ಹಾಗೂ ಹೈನುಗಾರಿಕೆ ಕಸುಬುಗಳಲ್ಲಿ ನಿರತರಾಗಿದ್ದು ಪ್ರತೀ ಗ್ರಾಮಗಳಲ್ಲಿ ಹಾಲು ಉತ್ಪಾದಕ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ತಾವು ಉತ್ಪಾದಿಸಿದ ಹಾಲನ್ನು ಸಂಘಕ್ಕೆ ಮಾರಾಟ ಮಾಡುವ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಂಡಿರುತ್ತಾರೆ ಹಾಗೂ ಕೆಲ ಸಣ್ಣ ರೈತ ಕುಟುಂಬಗಳು ಹಣ್ಣು ತರಕಾರಿ ದಿನಸಿ ಹೂಗಳನ್ನು ಬೆಳೆದು ಬೆಂಗಳೂರು ಮಾರುಕಟ್ಟೆಗೆ ಸರಬರಾಜು ಮಾಡಿ ಅದರಿಂದ ಬರುವ ಆಧಾಯದಿಂದ ಜೀವನ ನಡೆಸಿತ್ತಿರುವುದು ಬಾಗಶಃ ತಮ್ಮೆಲರಿಗೂ ತಿಳಿದಿರುವ ವಿಷಯ ಉದಾ:- ರಾಮಗೊಂಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಗ್ರಾಮದ ಸುಮಾರು 200 ಶೇರುದಾರ ಕುಟುಂಬಗಳು ನೊಂದಾಯಿಸಿ ಕೊಂಡಿರುತ್ತಾರೆ



Scanned with CamScanner

ಇವರ ಪೈಕಿ ಈಗ ಹಾಲಿ 80 ಜನ ಶೇರುದಾರರು ಸಂಘಕ್ಕೆ ಹಾಲು ಸರಬರಾಜು ಮಾಡುತಿರುತ್ತಾರೆ. ಇದರ ಮಾಸಿಕ ಆದಾಯ 12 ರಿಂದ 15 ಲಕ್ಷ ರೂಪಾಯಿಗಳಾಗಿರುತ್ತದೆ ಅಂದರೆ ವಾರ್ಷಿಕ ರೂ. 1,44,00,000/- (ಒಂದು ಕೋಟಿ ನಲವತ್ತನಾಲ್ಕು ಲಕ್ಷ ರೂಪಾಯಿಗಳು) ಹಾಗೂ ಸುಮಾರು 100 ಕ್ಕೂ ಹೆಚ್ಚು ರೈತ ಕುಟುಂಬಗಳು ಸರಿಸುಮಾರು ಮೆಲ್ಕಂಡ ಮೊತ್ತದ ಆಧಾಯವನ್ನು ಕೃಷಿ ಮೂಲಗಳಿಂದ ಪಡೆಯುವ ಮೂಲಕ ಗೌರವಯುತವಾದ ಜೀವನ ನೆಡಟಸಿತಿರುತ್ತಾರೆ. ಹೀಗೆ ಈ ಭಾಗದ ಎಲ್ಲಾ 17 ಗ್ರಾಮಗಳ ರೈತ ಕುಟುಂಬಗಳು ಕೃಷಿ ಮತ್ತು ಹೈನುಗಾರಿಕೆ ಕಸುಬುಗಳನ್ನು ಅವಲಂಬಿಸಿರುವುದು ಅಂಗೈ ಹುಣ್ಣಿನಷ್ಟೇ ಸ್ಪಷ್ಟ.

ಈಗ ನೀವು ಮಾಡಲು ಹೊರಟಿರುವ ಈ ಯೋಜನೆಯಿಂದ ಬಹುತೇಕ 17 ಗ್ರಾಮಗಳ ರೈತರು ನಿರುಧ್ಯೋಗಿಗಳಾಗಿ ಬೀದಿಗೆ ಬರುವುದರಲ್ಲಿ ಸಂಶಯವಿಲ್ಲ. ಹಿಂದುತ್ವ ಹಾಗೂ ಗೋ ರಕ್ಷಣೆಗೆ ಪ್ರಥಮ ಆದ್ಯತೆ ಕೊಡುವ ನಮ್ಮ ಸರ್ಕಾರ ರಾಜ್ಯದಲ್ಲಿ ಅಸ್ಥಿತ್ವದಲ್ಲಿದೆ. ಈ ಸಂದರ್ಭದಲ್ಲಿ 17 ಗ್ರಾಮಗಳ ಅವಿಭಾಜ್ಯ ಹಿಂದೂ ರೈತ ಕುಟುಂಬಗಳು ನೂರಾರು ವರ್ಷಗಳಿಂದ ತಮ್ಮ ಪ್ರಾಣಕ್ಕೆ ಪ್ರಾಣವಾಗಿ ಪೋಷಿಸಿಕೊಂಡು ಬರುತ್ತಿರುವ ಸುಮಾರು 3000 ಗೋವುಗಳು 5 ರಿಂದ 6 ಸಾವಿರ ಕುರಿ, ಮೇಕೆಗಳನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ತಮ್ಮ ಗಮನಕ್ಕೆ ತರುತ್ತಿದೇವೆ.

ಬಿ.ಡಿ.ಎ. ನಿರ್ಮಿಸಲು ಹೊರಟಿರುವ ಬಡಾವಣೆಯು ನಿವೇಶನ ಹಾಗೂ ವಸತಿ ಯೋಜನೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಭಾಗದ ರೈತರು ಹಾಗೂ ಕೆಲ ನಿವೇಶನದಾರರು ಕರೀದಿಸಿ ಕಟ್ಟಿಕೊಂಡಿರುವ ಮನೆಗಳನ್ನು ಯಾವುದೇ ಸೂಚನೆಯಿಲ್ಲದೆ ಧ್ವಂಸಗೊಳಿಸಿ ಮನೆ ಮಾಲೀಕರನ್ನು ಒಕ್ಕಲೆಬ್ಬಿಸಿ ಧ್ವಂಸಗೊಳಿಸಿದ ಜಾಗದಲ್ಲಿ ಬೇರೊಬ್ಬರಿಗೆ ನಿವೇಶನ ವಿತರಿಸುವ ಹೊಸ ಪದ್ಧತಿಗೆ ನಾಂದಿ ಹಾಡುತ್ತಿರುವ ಗುಮಾನಿ ಈ ಭಾಗದ ರೈತರು, ನಿವೇಶನದಾರರು ಹಾಗೂ ಕಟ್ಟಡ ಮಾಲಿಕರಲ್ಲಿ ಸಹಜವಾಗಿ ಮೂಡಿದೆ. ಸರ್ವೋಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನ ಗೊಳಿಸುವ ಪ್ರಕ್ರಿಯೆಯಲ್ಲಿ ಬಿ.ಡಿ.ಎ. ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ಥಾವನೆ ಹಾಗೂ ಸರ್ಕಾರ ನೀಡಿರುವ ಷರತ್ತುಬದ್ಧ ಮಂಜುರಾತಿಯನ್ನು ಈ ಭಾಗದ ರೈತರು ಗಮನಿಸಿರುತ್ತೆವೆ. ಅದರಂತೆ ಯೋಜನೆಗೆ ತಗಲುವ ವೆಚ್ಚವನ್ನು ಬಿ.ಡಿ.ಎ. ಬರಿಸಬೇಕೆಂದು ಸರ್ಕಾರ ತಿಳಿಸಿರುತ್ತದೆ. ಬಿ.ಡಿ.ಎ. ಈ ಯೋಜನೆಗೆ ಬೇಕಾಗುವ ಮೊತ್ತವನ್ನು ಯಾವ ಸಂಪನ್ಮೂಲಗಳಿಂದ ಸಂಗ್ರಹಿಸಿದ್ದಿರಿ ಅಥವಾ ಈಗಾಗಲೇ ನಿಮ್ಮಲ್ಲಿ ಸಂಪನ್ಮೂಲಗಳು ಇದೇಯೇ? ಇಲ್ಲವೆ ಎಂಬ ಅಂಶಗಳನ್ನು



Scanned with CamScanner

# ದಲಿತ ಸಂಘರ್ಷ ಸಮಿತಿ

(ಸಂಯೋಜಿತ) ಬೆಂಗಳೂರು ಜಿಲ್ಲಾ ಸಮಿತಿ

ಎಂ. ರಮೇಶ್ (ಜಿಲ್ಲಾ ಸಂಯೋಜಕ) M. Ramesh (Dist. Co-Ordinator) Mob : 9740152184

DALITHA SANGHARSHA SAMITHI. (CO-ORDINATION) BANGALORE DISTRICT COMMITTE

#92, ರಾಮಗೋಂಡನಹಳ್ಳಿ, ಸಿಂಗನಾಯಕನಹಳ್ಳಿ ಅಂಚೆ, ಯಲಹಂಕ, ಬೆಂಗಳೂರು – 56006

#92,Ramagondanahalli, Singanayakanahalli Post, Yelahanka, Bengaluru- 560064.


ಸಾರ್ವಜನಿಕವಾಗಿ ಪ್ರಕಟಿಸದೆ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ.

ಒತ್ತಾಯಗಳು :

1. ಡಾ॥ ಶಿವರಾಮಕಾರಂತ ಬಡಾವಣೆಗೆ ತಗಲುವ ವೆಚ್ಚವನ್ನು ಬಿ.ಡಿ.ಎ. ಯಾವ ಮೂಲದಿಂದ ಸಂಗ್ರಹಿಸಿದೆ ಎಂಬ ವಿಚಾರವನ್ನು ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಬೇಕು.

2. The Right to Fair Compensation and transparency in land Acquisition. Rehabilitation and re settlement ACT-2013 ರ ಕಾಯಿದೆ ಅಡಿಯಲ್ಲಿ ಭೂ ಪರಿಹಾರ ಹಾಗೂ ಪುನರ್‌ವಸತಿ ಕಲ್ಪಿಸಬೇಕು.

3. ಬಿ.ಡಿ.ಎ. ಉದ್ದೇಶಿಸಿರುವ ಯೋಜನೆಯು ವಸತಿ ಹಾಗೂ ನಿವೇಶನ ಹಂಚುವ ಯೋಜನೆಯಾಗಿರುವುದರಿಂದ ಈಗಾಗಲೇ ಈ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಿರುತ್ತದೆ ಆದರಿಂದ ವಸತಿ ನಿರ್ಮಿಸಿಕೊಡಿರುವವರು ಹಾಗೂ ನಿವೇಶನದಾರರನ್ನು ಒಕ್ಕಲೆಬ್ಬಿಸದೆ ಈ ಯೋಜನೆಯಿಂದ ಹೊರಗಿಡಬೇಕು.

4. ಈ ಭಾಗದಲ್ಲಿ ಕೃಷಿ ಮತ್ತು ಹೈನುಗಾರಿಕೆಯನ್ನು ಅವಲಂಬಿಸಿರುವ ಎಲ್ಲಾ ಕುಟುಂಬಗಳಿಗೆ ಪರ್ಯಾಯ ವೆವಸ್ಥೆ ಕಲ್ಪಿಸುವವರೆಗೂ ಈ ಯೋಜನೆಯನ್ನು ತಡೆಹಿಡಿಯಬೇಕು.

ವಂದನೆಗಳೊಂದಿಗೆ,

ಇಂತಿ,

ಎಂ. ರಮೇಶ್

ಬೆಂಗಳೂರು ಜಿಲ್ಲಾ ಸಂಯೋಜಕರು



Scanned with CamScanner